# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 232 | Pages. 2 | Date: 24-08-2026, MONDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 232 - ಪುಟಗಳು : 2 | 24-08-2026 | ಸೋಮವಾರ | Ph: 8762954248 | ದರ : ₹1


# ಕಾನೂನಿಗೆ ಗೌರವಿಸುವುದು ಎಲ್ಲರ ಕರ್ತವ್ಯ

## ನಾನು ಮೂಲತಃ ಉದ್ಯಮಿ | ಮಾಜಿ ಶಾಸಕ ಪ್ರೀತಂ ಗೌಡ ಹೇಳಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾನು ರಾಜಕಾರಣಕ್ಕೆ ಬರುವ ಮೊದಲು ಉದ್ಯಮಿಯಾಗಿದ್ದೆ. ನನ್ನ ಆಸ್ತಿ ಬಗ್ಗೆ ಕೆಲವರಿಗೆ ಸಂದೇಹಗಳಿದ್ದು ನ್ಯಾಯಾಲಯಕ್ಕೆ ಸೂಕ್ತ ಉತ್ತರ ನೀಡುತ್ತೇನೆ ಎಂದು ಮಾಜಿ ಶಾಸಕ ಪ್ರೀತಂ ಗೌಡ ಹೇಳಿದರು.

ಸುದ್ದಿಗಾರರರಿಗೆ ಭಾನುವಾರ ಆಸ್ತಿ ಘೋಷಣೆಯಲ್ಲಿ ಗೌಪ್ಯತೆ ಕಾಪಾಡಿಕೊಂಡಿದ್ದರ ವಿಚಾರಕ್ಕೆ ಸಂಬಂಧಿಸಿ ಎಫ್ಐಆರ್ ದಾಖಲಿಸಲು ನ್ಯಾಯಾಲಯ ನಿರ್ದೇಶನ ನೀಡಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಅವರು ಏನು ವಿಚಾರ ಕೇಳ್ತಾರೆ, ಎಲ್ಲಾ ರೀತಿಯ ಸಹಕಾರವನ್ನ ಕೊಡೋದು ಜವಾಬ್ದಾರಿ ಇರುತ್ತೆ. ಅ ಕೆಲಸವನ್ನು ಮಾಡುತ್ತೇನೆಂದರು.

ಎಲ್ಲದಕ್ಕೂ ರಾಜಕಾರಣ ಎಳೆದು ತರುವ ಕೆಲಸ ಮಾಡಲ್ಲ. ನಾನು ಪ್ರಮಾಣಿಕವಾಗಿ ಇದ್ದರೆ ಬೇರೆಯದರ ಬಗ್ಗೆ ಚಿಂತೆ ಮಾಡಬಾರದು. ನಾನು ಮೂಲತಃ ಉದ್ಯಮಿ. ಆ ಮೇಲೆ ರಾಜಕಾರಣಕ್ಕೆ ಬಂದಿದ್ದೇನೆ. ರಾಜಕಾರಣಕ್ಕೆ ಬರುವ ಮೊದಲು ನಾನು ಏನಾಗಿದ್ದೆ ಎಂಬುದು ಕೆಲವರಿಗೆ ಸಂದೇಹಗಳಿರುತ್ತವೆ. ಸಂದೇಹ ಬಗೆಹರಿಸಿಕೊಳ್ಳಲು ಕೋರ್ಟ್ ಮೆಟ್ಟಿಲೇರಿರುತ್ತಾರೆ. ಕಾನೂನಿಗೆ ತಲೆ ಬಾಗುವುದು ನನ್ನ ಜವಾಬ್ದಾರಿ ಎಂದರು.



ಗ್ರಾಮ ಪಂಚಾಯಿತಿ ಚುನಾವಣೆ ಮೀಸಲಾತಿ ಪಟ್ಟಿ ಸಂಬಂಧ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ಮಹತ್ವ ನೀಡುವ ಅಗತ್ಯವಿಲ್ಲ. ಪಟ್ಟಿಯಲ್ಲಿ ಲೋಪದೋಷ ಇದ್ದರೆ ನ್ಯಾಯಾಲಯ ಮೆಟ್ಟಿಲೇರಲು ಅವರಿಗೆ ಅವಕಾಶಗಳಿವೆ ಎಂದು ತಿರುಗೇಟು ನೀಡಿದರು.

ಮೀಸಲಾತಿ ಅಧಿಸೂಚನೆಯಿಂದ ಯಾರಿಗೆ ಅನುಕೂಲ ಆಗಿರುತ್ತೆ ಅವರಿಗೆ ಸರಿ ಅನ್ನಿಸಿರುತ್ತದೆ. ಯಾರಿಗೆ ಅನಾನುಕೂಲ ಆಗಿರುತ್ತೆ ಅವರಿಗೆ ಸಮಸ್ಯೆಯಾಗಿರುತ್ತದೆ. ನನ್ನನ್ನು ಒಳಗೊಂಡಂತೆ ಎಲ್ಲಾ ರಾಜಕಾರಣಿಗಳಿಗೂ ಹಾಗೆ ಅನಿಸುತ್ತದೆ. ಹಾಗಾಗಿ ಅದಕ್ಕೆ ಮಹತ್ವ ಕೊಡುವ ಅವಶ್ಯಕತೆಯಿಲ್ಲ. ಯಾರೇ ಆದರೂ ನಮ್ಮ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕು. ಲೋಪದೋಷ ಇದ್ದರೆ ಕಾನೂನು ಹೋರಾಟ ಮಾಡಬಹುದು. ಜಿಲ್ಲಾಧಿಕಾರಿ ಅವರು ಕಾನೂನು ಉಲ್ಲಂಘಿಸಿದ್ದರೆ ನ್ಯಾಯಾಲಯದ ಮೆಟ್ಟಿಲೇರಬಹುದು. ಖಂಡಿತವಾಗಿಯೂ ಕೋರ್ಟ್ ತಡೆಯಾಜ್ಞೆ ವಿಧಿಸುತ್ತದೆ. ನಾನು ಜೆಡಿಎಸ್ ವಕ್ತಾರನಾಗಲು ತಯಾರಿಲ್ಲ. ಅವರಿಗೆ ಸಮಸ್ಯೆ ಇದೆ ಅದನ್ನು ಹೇಳಿಕೊಂಡಿದ್ದಾರೆ ಎಂದರು.

ಇತ್ತೀಚೆಗೆ ಸಂಸದ ಶ್ರೇಯಸ್ ಪಟೇಲ್ ಜೊತೆ ನಡೆದ ಪಿಸುಮಾತಿನ ಕುರಿತು ಪ್ರತಿಕ್ರಿಯಿಸಿದ ಅವರು, ನಮ್ಮ ಸ್ಥಳೀಯ ಶಾಸಕರನ್ನು ಕೂರಿಸಿಕೊಂಡು ಅವರು ನಾನು ಚೆನ್ನಾಗಿದ್ದೇವೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದಾಗ ಅದಕ್ಕೆ ಪ್ರಾಮುಖ್ಯತೆ ನೀಡಲಿಲ್ಲ. ಅವರಿಬ್ಬರು ಒಟ್ಟಿಗೆ ಗಣಪತಿ ಉತ್ಸವದಲ್ಲಿ ಕೈ ಕೈ ಹಿಡಿದುಕೊಂಡು ಓಡಾಡಿದರೂ ಯಾರೂ ಮಾತನಾಡವುದಿಲ್ಲ.

### ಜನರ ಆಶೀರ್ವಾದ ಸಿಗುವ ವಿಶ್ವಾಸ

ಕ್ಷೇತ್ರದ ಜನರು ನನಗೆ ಅವಕಾಶ ಕೊಡುತ್ತಾರೆಂಬ ವಿಶ್ವಾಸವಿದ್ದು ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕೆಲಸ ಮಾಡಲು ಸಿದ್ಧನಿದ್ದೇನೆ. ಮುಂದಿನ ದಿನಗಳಲ್ಲಿ ಆ ಕನಸು ನನಸಾಗುವ ಸಾಧ್ಯತೆಯಿದೆ. ಜಿಲ್ಲೆಯ ಅಭಿವೃದ್ಧಿಗೆ ವೇಗ ನೀಡಲಿ ಎಂಬ ಉದ್ದೇಶದಿಂದ ಕೆ.ಎಂ. ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲಾಗಿದೆ. ಅವರು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿ ಎಂದು ಆಶಿಸುತ್ತೇನೆ ಎಂದರು.

ಆದರೆ ನಾನು ಕೂಳಿತರೆ, ನಿಂತರೆ ಸುದ್ದಿ, ಬರಲಿಲ್ಲ ಎಂದರೂ ಸುದ್ದಿಯಾಗುತ್ತದೆ. ಅದು ಪ್ರೀತಂ ಗೌಡನ ಶಕ್ತಿ ಎಂದರು.

ನೈಸ್ ರಸ್ತೆ ಟೋಲ್ ವಿಚಾರವಾಗಿ ನನಗೆ ಮಾಹಿತಿ ಇಲ್ಲ. ವಿಚಾರ ತಿಳಿದುಕೊಂಡು ಮಾತನಾಡುತ್ತೇನೆ. ನೈಸ್ ರಸ್ತೆ ಬಗ್ಗೆ ಮಾಹಿತಿ ಕಡಿಮೆ ಇದೆ. ನಾವು ಹಾಸನದವರು, ಈ ಭಾಗದಲ್ಲಿ ಇರುವುದರಿಂದ ಆ ಭಾಗದ್ದು ಗೊತ್ತಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದ್ದಾರೆ ಅಂದರೆ ಅದರಲ್ಲಿ ಸತ್ಯಾಸತ್ಯತೆ ಇರುತ್ತೆ. ಆ ವಿಚಾರದ ಬಗ್ಗೆ ಮಾತನಾಡುವಷ್ಟು ವಿಚಾರಗಳು ನನಗೆ ಗೊತ್ತಿಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ತೆಂಗು ಬೆಳೆಗಾರರಿಗೆ ನೆರವಿಗೆ ಬರುವಂತೆ ಸಂಸದರ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ತೆಂಗು ಬೆಳೆಗಾರರ ಹಿತದೃಷ್ಟಿಯಿಂದ ತೆಂಗು ಬೆಳೆಗೆ ಸಮಗ್ರ ವಿಮಾ ರಕ್ಷಣೆ ಒದಗಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇತ್ತೀಚೆಗೆ ನಡೆದ ಲೋಕಸಭೆ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿರುವ ಅವರು, ಪ್ರಕೃತಿ ವಿಕೋಪ, ಅತಿವೃಷ್ಟಿ, ಚಂಡಮಾರುತ, ಕೀಟ ಹಾಗೂ ರೋಗಬಾಧೆಯಿಂದ ತೆಂಗು ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಬೆಳೆಗಾರರಿಗೆ ಎದುರಾಗುತ್ತಿರುವ ನಷ್ಟವನ್ನು ಸಮರ್ಥವಾಗಿ ಎದುರಿಸಲು ಇನ್ನಷ್ಟು ಪರಿಣಾಮಕಾರಿ ಹಾಗೂ ಸಮಗ್ರ ವಿಮಾ ರಕ್ಷಣೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಿ, ರೈತರಿಗೆ ಸುಲಭವಾಗಿ ದೊರೆಯುವ ಹಾಗು ರೈತಸ್ನೇಹಿ ವಿಮಾ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಆಗ್ರಹಿಸಿದ್ದಾರೆ.



ಹಾಸನ ಜಿಲ್ಲೆಯ ಸಾವಿರಾರು ರೈತರ ಬದುಕಿಗೆ ತೆಂಗು ಬೆಳೆ ಪ್ರಮುಖ ಆಧಾರವಾಗಿದ್ದು, ಬೆಳೆ ನಷ್ಟವು ರೈತರ ಆದಾಯದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಆದ್ದರಿಂದ ರೈತರ ಬೆಳೆ, ಆದಾಯ ಮತ್ತು ಜೀವನೋಪಾಯದ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

# ಅಪಘಾತ: ಬೈಕ್ ಹಿಂಬದಿ ಸವಾರ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಚಲಿಸುತ್ತಿದ್ದ ಬೈಕ್ಗೆ ಹಿಂದಿನಿಂದ ವೇಗವಾಗಿ ಬಂದ ಲಾರಿ ಡಿಕ್ಕಿಯಾಗಿ ಹಿಂಬದಿ ಸವಾರ ಮೃತಪಟ್ಟಿರುವ ಘಟನೆ ಅಡಗೂರು ಗೇಟ್ ಸಮೀಪ ಶನಿವಾರ ರಾತ್ರಿ ನಡೆದಿದೆ.

ಪಟ್ಟಣದ ಎಂ.ಎಲ್.ನಂಜೇಶ್‌ಗೌಡ ಮೃತರು. ಕೃಷ್ಣಕುಮಾರ್ ಅವರೊಂದಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ವೇಗವಾಗಿ ಬಂದ ಲಾರಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಬೈಕ್ ಮೇಲಿದ್ದ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದು ನಂಜೇಶ್‌ಗೌಡ ಅವರಿಗೆ ಗಂಭೀರ ಏಟಾಗಿದೆ. ಚಿಕಿತ್ಸೆಗಾಗಿ ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಾಲೇಜಿಗೆ ಮೂಲಸೌಕರ್ಯ ಕಲ್ಪಿಸುವ ಭರವಸೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವುದರ ಜೊತೆಗೆ ಶೈಕ್ಷಣಿಕ ಗುಣಮಟ್ಟ ಹಾಗೂ ದಾಖಲಾತಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಭರವಸೆ ನೀಡಿದರು.

ಪಟ್ಟಣದ ಕುಡುಗರವಳ್ಳಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲಿ ಹಮ್ಮಿಕೊಂಡಿದ್ದ ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಸಭೆಯಲ್ಲಿ ಮಾತನಾಡಿದ ಅವರು, ಕಾಲೇಜಿನ ಮೂಲಸೌಕರ್ಯ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಹತ್ವದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಶುದ್ಧ ಕುಡಿಯುವ ನೀರು, ವಿದ್ಯುತ್, ಸಿಸಿಟಿವಿ ಕ್ಯಾಮರಾ ಅಳವಡಿಕೆ, ಗ್ರಂಥಾಲಯ ಅಭಿವೃದ್ಧಿ ಸೇರಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ವಿವಿಧ ಸೌಲಭ್ಯ ಕಲ್ಪಿಸುವ ಕುರಿತು ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ಸಿಡಿಸಿ ಸದಸ್ಯರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದರು.

ಕಾಲೇಜಿನಲ್ಲಿ ಪ್ರಸ್ತುತ ಇರುವ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಗುರುತಿಸಿ, ಹಂತ ಹಂತವಾಗಿ ಪರಿಹರಿಸಲಾಗುವುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮೂಲಭೂತ ಸೌಕರ್ಯಗಳ ಕೊರತೆ ಅಡ್ಡಿಯಾಗದಂತೆ ಕ್ರಮ ವಹಿಸಲಾಗುವುದು. ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸುವುದರ ಜೊತೆಗೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಕಾಲೇಜಿನ ವಿವಿಧ ವಿಭಾಗಗಳಲ್ಲಿ ಉಪನ್ಯಾಸಕರ ಕೊರತೆ ಇರುವ ಕುರಿತು ಮಾಹಿತಿ ಪಡೆದಿದ್ದೇನೆ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗಬಾರದು. ಖಾಲಿ ಇರುವ ಹುದ್ದೆಗಳಿಗೆ ಅಗತ್ಯ ಉಪನ್ಯಾಸಕರನ್ನು ನೇಮಕ ಮಾಡುವಂತೆ ಶೀಘ್ರದಲ್ಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು.

ಈ ಸಂಬಂಧ ಸಂಬಂಧಪಟ್ಟ ಸಚಿವರು ಹಾಗು ಅಧಿಕಾರಿಗಳ ಗಮನ ಸೆಳೆಯಲಾಗುವುದು ಎಂದು ಹೇಳಿದರು.

ಗುರು ಹಿರಿಯರು ಕಟ್ಟಿ ಬೆಳೆಸಿರುವ ಕಾಲೇಜನ್ನು ಉಳಿಸಿ, ಮತ್ತಷ್ಟು ಅಭಿವೃದ್ಧಿಪಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆ ಜವಾಬ್ದಾರಿಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಶೈಕ್ಷಣಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ಕಾಲೇಜಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ಭರವಸೆ ನೀಡಿದರು.

ಸರ್ಕಾರಿ ಕಾಲೇಜುಗಳು ಗ್ರಾಮೀಣ ಭಾಗದ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪ್ರಮುಖ ಆಸರೆಯಾಗಿವೆ. ಹೀಗಾಗಿ ಕಾಲೇಜಿನಲ್ಲಿರುವ ಕೊರತೆಗಳನ್ನು ನಿವಾರಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ವಾತಾವರಣ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ. ಸಿಡಿಸಿ ಸದಸ್ಯರು, ಪ್ರಾಂಶುಪಾಲರು ಹಾಗು ಸಿಬ್ಬಂದಿಯ ಸಹಕಾರದೊಂದಿಗೆ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಕೆಲಸಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದೆಂದರು.

ಸಭೆಯಲ್ಲಿ ಸಿಡಿಸಿ ಸದಸ್ಯರಾದ ಸುಶೀಲ್ ಸೋಮಶೇಖರ್, ಮೋಹನ್, ಸುದೀಶ್, ಕೌಶಿಕ್, ಕಾಲೇಜಿನ ಪ್ರಾಂಶುಪಾಲೆ ಡಾ. ಸಹನಾ ಮತ್ತಿತರರಿದ್ದರು.

# ನಮ್ಮೆದುರಿನ ಸತ್ಯ ಪ್ರಶ್ನಿಸುವುದೇ ವಿಜ್ಞಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಜ್ಞಾನ ಎಂದರೆ ಯಾವುದೋ ಬ್ರಹ್ಮ ಜ್ಞಾನವಲ್ಲ. ಕಣ್ಣ ಮುಂದಿನ ಸತ್ಯಗಳನ್ನು ಪ್ರಶ್ನಿಸುವುದೇ ವಿಜ್ಞಾನ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿಯ (ಬಿಜಿವಿಎಸ್) ರಾಜ್ಯ ಸಮಿತಿ ಸದಸ್ಯ ಎಚ್.ಟಿ. ಗುರುರಾಜು ಹೇಳಿದರು.

ನಗರದ ಕುವೆಂಪು ನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಾಲೆಯ ಸಂಭ್ರಮದ ಶನಿವಾರದ ಅಂಗವಾಗಿ ಬಿಜಿವಿಎಸ್ ಜಿಲ್ಲಾದ್ಯಂತ ಆಯೋಜಿಸುತ್ತಿರುವ ಓದಿನ ಮಜಾ ಆಂದೋಲನ ಉದ್ಘಾಟಿಸಿ ಮಾತನಾಡಿದರು.

ನಾವು ತೊಡುವ ಉಡುಪು, ಚಲಾಯಿಸುವ ಬೈಕ್, ಕಾರು, ಮನೆಯಲ್ಲಿರುವ ಎಲ್.ಪಿ.ಜಿ ಗ್ಯಾಸ್, ವಿದ್ಯುತ್ ಹಾಗೂ ಯಂತ್ರೋಪಕರಣಗಳು. ಇವೆಲ್ಲವೂ ವಿಜ್ಞಾನದ ಕೊಡುಗೆ. ವಿಜ್ಞಾನವು ದಿನನಿತ್ಯದ ಕೆಲಸದ ಶ್ರಮವನ್ನು ಕಡಿಮೆ ಮಾಡಿ, ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ ಇಂದು ಧಾರ್ಮಿಕ ಆಚರಣೆಗಳು ಆಡಂಬರವಾಗುತ್ತಿದ್ದು, ಅವುಗಳಿಗಿಂತ ಹೆಚ್ಚಾಗಿ ನಾವು ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆಗೆ ಹಾಗೂ ಬದುಕನ್ನು ಹಸನುಗೊಳಿಸುವ ವೈಜ್ಞಾನಿಕ ಚಿಂತನೆಗಳಿಗೆ ಆದ್ಯತೆ ನೀಡಬೇಕಿದೆ ಎಂದು ಗುರುರಾಜು ಕರೆ ನೀಡಿದರು.

ಇಂದಿನ ಡಿಜಿಟಲ್ ಯುಗವನ್ನು ಉಲ್ಲೇಖಿಸಿದ ಅವರು, ಪ್ರತಿಯೊಬ್ಬರ ಕೈಯಲ್ಲೂ ಆಂಡ್ರಾಯ್ಡ್ ಫೋನ್‌ಗಳಿದ್ದು, ಪುಸ್ತಕ ಓದುವ ಮಹತ್ವ ಕಡಿಮೆಯಾಗಿದೆ. ಮೊಬೈಲ್‌ಗಿಂತ ಪುಸ್ತಕಗಳು ನಮಗೆ ಹೊಸ ಪ್ರಪಂಚವನ್ನು ತೆರೆದುಕೊಟ್ಟು ವಿಶಾಲ ಜ್ಞಾನ ನೀಡುತ್ತವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ 25 ಶಾಲೆಗಳಲ್ಲಿ ನಿರಂತರವಾಗಿ ಪುಸ್ತಕ ಓದುವ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಬಿಜಿವಿಎಸ್ ರಾಜ್ಯ ಜಂಟಿ ಕಾರ್ಯದರ್ಶಿ ಅಹಮದ್ ಹಗರೆ ಮಾತನಾಡಿ, ಓದುವ ಹವ್ಯಾಸವು ಬಹುಮುಖಿ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿ. ಪುಸ್ತಕದೊಳಗೆ ಹುದುಗಿದ ಮನಸ್ಸು ಭಾಷೆ, ಸಂಸ್ಕೃತಿ, ಸಾಹಿತ್ಯ ಹಾಗೂ ಶಿಕ್ಷಣದ ಜೊತೆಗೆ ಬದುಕುವ ಸರಿಯಾದ ದಾರಿಯನ್ನು ತೋರಿಸುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳ ವಿಶ್ಲೇಷಣೆ ಮಾಡುವ ಗುಣ ಬೆಳೆಸುವ ಜೊತೆಗೆ, ವಿದ್ಯಾರ್ಥಿಗಳನ್ನು ಮೊಬೈಲ್ ಗುಲಾಮಗಿರಿಯಿಂದ ದೂರವಿರಿಸಿ ಪರೀಕ್ಷೆ ಎದುರಿಸುವ ಎದೆಗಾರಿಕೆ ನೀಡುತ್ತದೆ ಎಂದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು.

ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಚಿನ್ನೇನಹಳ್ಳಿ ಸ್ವಾಮಿ ಮಾತನಾಡಿ, ಪುಸ್ತಕಗಳು ಮಸ್ತಕವನ್ನು ತೆರೆಯುತ್ತವೆ. ಶಾಲಾ ಪಠ್ಯಪುಸ್ತಕಗಳಿಗೆ ಗಡಿರೇಖೆಗಳಿರುತ್ತವೆ. ಆದರೆ ಸಾಹಿತ್ಯದ ಓದು ವಿಶಾಲ ಕಣ್ಣೋಟ ನೀಡಿ, ಶಾಲಾ ಅಭ್ಯಾಸವನ್ನು ಸುಲಭ ಹಾಗೂ ಆನಂದದಾಯಕವಾಗಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕಿ ಎನ್.ಎಸ್. ರಾಧಾ ಅವರು, ಮಕ್ಕಳನ್ನು ಏಕತಾನತೆಯಿಂದ ಹೊರತಂದು ಅವರಲ್ಲಿರುವ ಪ್ರತಿಭೆ ಹೊರಹಾಕಲು ಪ್ರತಿ ನಾಲ್ಕನೇ ಶನಿವಾರ ಸಂಭ್ರಮದ ಶನಿವಾರ (ಬ್ಯಾಗ್ ರಹಿತ ದಿನ) ಆಚರಿಸಲಾಗುತ್ತಿದೆ. ಈ ದಿನ ಬಿಜಿವಿಎಸ್ ಓದಿನ ಮಜಾ ಹಮ್ಮಿಕೊಂಡು ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸುತ್ತಿರುವುದು ಅಭಿನಂದನೀಯ ಎಂದರು.

ತಾವು ಓದಿದ ಪುಸ್ತಕದ ಕುರಿತು ಅತ್ಯುತ್ತಮವಾಗಿ ಅಭಿಪ್ರಾಯ ಹಂಚಿಕೊಂಡ ಕವಿತ (ಪ್ರಥಮ), ಇಂಪನ (ದ್ವಿತೀಯ) ಹಾಗೂ ಚಿರಂತ್ (ತೃತೀಯ) ಬಹುಮಾನ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಮೀನಾ, ಮೀನಾಕ್ಷಿ, ಡಿ.ಎನ್.ಮೀನಾಕ್ಷಿ, ಆರ್. ರಶ್ಮಿ, ಎಲ್.ಎಚ್. ವಸಂತಮ್ಮ ಹಾಗೂ ಪಾಲಾಕ್ಷ, ರವೀಂದ್ರ ಇದ್ದರು.

# ಲಂಚ ತೆಗೆದುಕೊಳ್ಳುವುದೇ ಟಿಹೆಚ್ ಕೆಲಸವಾ..?




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಆರೋಗ್ಯ ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ನಿವೇಶನಗಳನ್ನು ಹಸ್ತಾಂತರಿಸದೆ ವಿಳಂಬ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಶಾಸಕ ಎ. ಮಂಜು ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕು ಪಂಚಾಯತಿ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ, ಬಾಕಿ ಇರುವ ಕಾಮಗಾರಿಗಳು ಹಾಗೂ ಇಲಾಖಾವಾರು ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಈ ವೇಳೆ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಆರೋಗ್ಯ ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ನಿವೇಶನ ಹಸ್ತಾಂತರವಾಗದೆ ಕಾಮಗಾರಿ ವಿಳಂಬವಾಗುತ್ತಿರುವ ವಿಷಯ ಸಭೆಯಲ್ಲಿ ಪ್ರಸ್ತಾಪವಾಯಿತು. ಇದರಿಂದ ಆಕ್ರೋಶಗೊಂಡ ಶಾಸಕ ಎ. ಮಂಜು, ಸಂಬಂಧಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಟಿಹೆಚ್ಒ ಅವರ ಕಾರ್ಯವೈಖರಿ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಎ. ಮಂಜು, ಟಿಹೆಚ್ಒ ಇರುವುದು ಬರೀ ಲಂಚ ತೆಗೆದುಕೊಳ್ಳುವುದಕ್ಕಾ? ಕೆಲಸ ಆಗಬೇಕು ಅಂದ್ರೆ ನಿಮ್ಮ ಕೈ ಬಿಸಿ ಮಾಡಬೇಕಪ್ಪಾ ಎಂದು ಖಾರವಾಗಿ ಪ್ರಶ್ನಿಸಿದರು.

ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ ಅನಗತ್ಯ ವಿಳಂಬವಾಗಬಾರದು. ಸರ್ಕಾರದ ಯೋಜನೆಗಳು ಹಾಗೂ ಇಲಾಖೆಯ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ಸೂಚಿಸಿದ ಅವರು, ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು ಎಂದರು.

# ಎ.ಟಿ.ರಾಮಸ್ವಾಮಿ ರಾಜಕಾರಣಕ್ಕೆ ಮರಳಲಿ: ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ಸಮಗ್ರ ಅಭಿವೃದ್ಧಿ, ರೈತರ ಹಿತಾಸಕ್ತಿ ಹಾಗೂ ಬಡವರ ಕಲ್ಯಾಣದ ದೃಷ್ಟಿಯಿಂದ ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅವರು ರಾಜಕಾರಣದಿಂದ ಹಿಂದೆ ಸರಿಯದೆ ಮತ್ತೆ ಸಕ್ರಿಯ ರಾಜಕಾರಣಕ್ಕೆ ಮರಳಬೇಕು ಎಂದು ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು' ಒತ್ತಾಯಿಸಿದರು.

ತಾಲೂಕಿನ ಮಲ್ಲಿಪಟ್ಟಣ ಹೋಬಳಿಯ ಖಾಸಗಿ ಕಲ್ಯಾಣ ಮಂಟಪದಲ್ಲಿ ಎ.ಟಿ. ರಾಮಸ್ವಾಮಿ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು ಹಮ್ಮಿಕೊಂಡಿದ್ದ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಂಡು, ಮುಂದಿನ ದಿನಗಳಲ್ಲಿ ಅವರನ್ನು ಸಕ್ರಿಯ ರಾಜಕಾರಣಕ್ಕೆ ಕರೆತರುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಸಂಘಟಿತವಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು.




ಮುಖಂಡ ಹುಲಿಕಲ್ ರಾಜಶೇಖರ್ ಮಾತನಾಡಿ, ಎ.ಟಿ. ರಾಮಸ್ವಾಮಿ ಅವರು ತಾಲೂಕಿಗೆ ನೀಡಿರುವ ಕೊಡುಗೆ ಹಾಗೂ ಜನಪರ ಕಾಳಜಿ, ಪ್ರಾಮಾಣಿಕತೆ ಜನಪರ ನಾಯಕತ್ವದ ಅಗತ್ಯ ಮುಖ್ಯವಾಗಿದೆ ಎಂದರು.

ಮುಖಂಡ ಎಚ್. ಕೊಂಗಳಲೆ ಕೇಶವಮೂರ್ತಿ ಮಾತನಾಡಿ, ಕುಲುಷಿತ ರಾಜಕಾರಣದಿಂದ ಬೇಸತ್ತು ಎ.ಟಿ. ರಾಮಸ್ವಾಮಿ ಅವರು ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ತಾಲೂಕಿನ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳಿಗೆ ಧ್ವನಿಯಾಗಲು ಅವರಂತಹ ರಾಜಕಾರಣಿಗಳ ಸೇವೆ ಅತ್ಯವಶ್ಯಕ ಎಂದು ಹೇಳಿದರು.

ಮುಖಂಡ ಮಾಗಲು ಬಸವರಾಜು ಮಾತನಾಡಿ, ರೈತರ ಸಮಸ್ಯೆಗಳು, ನೀರಾವರಿ, ಕೃಷಿ, ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ, ಶಿಕ್ಷಣ, ಉದ್ಯೋಗ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತಾಲೂಕು ಅಭಿವೃದ್ಧಿ ಕಾಣಲು ರಾಮಸ್ವಾಮಿ ಅವರ ಜನಪರ ಕಾಳಜಿಯಿಂದ ಸಾಧ್ಯವಾಗಿದೆ. ಜನರ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಹಾಗೂ ದೂರದೃಷ್ಟಿಯುಳ್ಳ ನಾಯಕತ್ವ ಅವರಲ್ಲಿದೆ. ಈ ಹಿನ್ನೆಲೆಯಲ್ಲಿ ಎ.ಟಿ. ರಾಮಸ್ವಾಮಿ ಅವರು ಮತ್ತೆ ರಾಜಕಾರಣಕ್ಕೆ ಬಂದು ಜನಸೇವೆ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಎ.ಟಿ. ರಾಮಸ್ವಾಮಿ ಅವರ ರಾಜಕೀಯ ಪ್ರವೇಶವು ಯಾವುದೇ ವ್ಯಕ್ತಿ ಅಥವಾ ಪಕ್ಷದ ವಿರುದ್ಧದ ಹೋರಾಟವಲ್ಲ ಎಂದರು.

# ಪ್ರಾರಂಭಿಕ ಹಂತದಲ್ಲೇ ವ್ಯಾಜ್ಯ ಪರಿಹರಿಸಿಕೊಳ್ಳಲು ಪ್ರಯತ್ನಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾನವನ ದುರಾಸೆ ಹಾಗೂ ಇನ್ನೊಬ್ಬರ ಹಕ್ಕು ಕಸಿಯುವುದರಿಂದ ವ್ಯಾಜ್ಯಗಳು ಉದ್ಭವವಾಗುತ್ತವೆ. ಅಂತಹ ಸಮಸ್ಯೆಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಇತ್ಯರ್ಥಪಡಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳುವುದು ಎಲ್ಲರ ಆದ್ಯತೆಯಾಗಬೇಕೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಹೇಳಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳಿಂದ ತಾಲ್ಲೂಕಿನ ಹೆರಗು ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆ, ಸರ್ಕಾರಿ ಯೋಜನೆ ಹಾಗೂ ಜಾಗೃತಿ ಯೋಜನೆ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪರಸ್ಪರ ಹೊಂದಾಣಿಕೆ, ವಿಶ್ವಾಸ, ನಂಬಿಕೆಗಳು ಇದ್ದಾಗ ಮಾತ್ರ ವ್ಯಾಜ್ಯವಿಲ್ಲದೆ ಬದುಕಲು ಸಾಧ್ಯವಿದೆ. ಗ್ರಾಮಗಳಲ್ಲಿ ಉದ್ಭವಿಸುವ ಸಿವಿಲ್ ವ್ಯಾಜ್ಯಗಳು ಸೌಹಾರ್ದಯುತವಾಗಿ ಪ್ರಾರಂಭಿಕ ಹಂತದಲ್ಲಿಯೇ ಮುಕ್ತಾಯಗೊಳ್ಳಬೇಕು. ಎಲ್ಲರೂ ಹೃದಯ ವೈಶಾಲ್ಯತೆ ಮೆರೆಯಬೇಕು. ಪರಸ್ಪರರನ್ನು ಗೌರವಿಸುವ ಗುಣ ಅಳವಡಿಸಿಕೊಳ್ಳಬೇಕು. ಆಗಮಾತ್ರ ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆ ಸಾಕಾರಗೊಳ್ಳುತ್ತದೆಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮಾತನಾಡಿ, ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆಯಲ್ಲಿ ಸಂಧಾನ ಮತ್ತು ರಾಜಿಸೂತ್ರ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಾಜ್ಯಗಳನ್ನು ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಹಿಂದಿನ ಕಾಲದ ಪಂಚಾಯಿತಿಯ ಪರಿಕಲ್ಪನೆಯಲ್ಲಿಯೇ ವ್ಯಾಜ್ಯ ಮುಕ್ತ ಗ್ರಾಮ ಪರಿಕಲ್ಪನೆಯನ್ನು ರೂಪಿಸಿದ್ದು ಬಗೆಹರಿಸಬಹುದಾದ ಸಿವಿಲ್ ಪ್ರಕರಣಗಳು ಚಿಕ್ಕಪುಟ್ಟ ವೈಮನಸುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಉಚಿತವಾಗಿ ಕಾನೂನು ಸಲಹೆ, ನೆರವು ಅರಿವನ್ನು ಜನರಿಗೆ ನೀಡುತ್ತಿದೆ. ತಾಲ್ಲೂಕಿನ ಹೆರಗು ಪಂಚಾಯಿತಿಯನ್ನು ವ್ಯಾಜ್ಯ ಮುಕ್ತ ಗ್ರಾಮವನ್ನಾಗಿ ನಿಮಾಣ ಮಾಡಲು ಆಯ್ಕೆ ಮಾಡಿಕೊಳ್ಳಲಾಗಿದ್ದು ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುತ್ತಿವೆ ಎಂದರು.

ಅಪರ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಮಾತನಾಡಿ, ಅಪರಾಧ ಪ್ರಕರಣ ಕಡಿಮೆಯಾಗಲು ಪ್ರತಿಯೊಬ್ಬರು ಶ್ರಮ ವಹಿಸಬೇಕು. ವ್ಯಾಜ್ಯ ಮುಕ್ತ ಗ್ರಾಮವಾಗಲೂ ಎಲ್ಲರೂ ಸಹಕಾರ ನೀಡಬೇಕು. ಆಸ್ತಿ ವಿಚಾರವಾಗಿ ಹಳ್ಳಿಗಳಲ್ಲಿ ಅಪರಾಧ ಕೃತ್ಯ ಹೆಚ್ಚುತ್ತಿವೆ. ಸಂಬಂಧಗಳು ವಿಘಟಿತವಾಗುತ್ತಿವೆ. ಕೇವಲ ಪರಿಕಲ್ಪನೆಯಲ್ಲಿ ಮಾತ್ರವೇ ವ್ಯಾಜ್ಯ ಮುಕ್ತ ಎಂಬ ಪದ ಬಳಕೆಯಾಗದೆ ನಿಜರೂಪದಲ್ಲಿ ಸಹಕಾರಗೊಳ್ಳಬೇಕೆಂದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಮಾತನಾಡಿ, ಗ್ರಾಮೀಣ ಭಾರತದ ಸಾಂಪ್ರದಾಯಿಕ ಪಂಚಾಯತ್ ವ್ಯವಸ್ಥೆಯಲ್ಲಿ ಇದ್ದಂತಹ ಸೌಹಾರ್ದತೆ ಇತ್ತೀಚಿನ ದಿನಗಳಲ್ಲಿ ಕಳೆದು ಹೋಗುತ್ತಿದ್ದು ಚಿಕ್ಕಪುಟ್ಟ ವ್ಯಾಜ್ಯಗಳಿಗೂ ಪೊಲೀಸ್ ಠಾಣೆ ಮೆಟ್ಟಿಲೇರುವವರ ಸಂಖ್ಯೆ ಹೆಚ್ಚುತ್ತಿದೆ. ಪ್ರತಿಯೊಬ್ಬರಲ್ಲೂ ಹೊಂದಾಣಿಕೆಯ ಅಭಾವ ಕಂಡುಬರುತ್ತಿದೆ. ಇದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಅದನ್ನು ಸೌಹಾರ್ದತೆಯಿಂದ ರಾಜಿ ಮೂಲಕ ಬಗೆಹರಿಸಿಕೊಂಡಲ್ಲಿ ಬಹುಪಾಲು ವ್ಯಾಜ್ಯಗಳು ಪೊಲೀಸ್ ಠಾಣೆಯ ನ್ಯಾಯಾಲಯಗಳ ಮೆಟ್ಟಲೇರದೆ ಕೊನೆಗೊಳ್ಳುತ್ತವೆ ಎಂದು ತಿಳಿಸಿದರು.

ಹೆರಗು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ವಿಕಾಸ್ ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಇರುವಂತಹ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಸಿಡಿಪಿಓ ಕೆ.ಸಿ.ಜ್ಯೋತಿಲಕ್ಷ್ಮಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಯೋಜನೆಗಳ ಕುರಿತು ಬೆಳಕು ಚೆಲ್ಲಿದರು.

ಕಾರ್ಮಿಕ ನಿರೀಕ್ಷಕ ಆನಂದರಾಮ, ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿ ಚಂದ್ರಶೇಖರ್ ಮಾತನಾಡಿದರು.

ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿ ಜಿ.ಎ.ನಿಶ್ಚಿತ, ಅಭಿವೃದ್ಧಿ ಅಧಿಕಾರಿ ಎ.ಹೆಚ್. ಅಭಿಲಾಷ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಬಿ.ಎಂ.ವಿಜಯ್, ಶಿಕ್ಷಣ ಇಲಾಖೆಯ ಚಂದ್ರಯ್ಯ ಹಾಜರಿದ್ದರು.

# ನಾವು ಬದುಕುತ್ತಿದ್ದೇವೆಯೇ.... ಅಥವಾ ಬದುಕನ್ನು ಪ್ರದರ್ಶಿಸುತ್ತಿದ್ದೇವೆಯೇ?

**ರೇವತಿ ಹೆಚ್ ಆರ್**
**ವಕೀಲರು, ಹಾಸನ**



ಸಹೃದಯ ಓದುಗ ಮಿತ್ರರೇ, ಮನುಷ್ಯನ ಬದುಕು ಅವನದೇ ಎಂದು ಹೇಳುತ್ತೇವೆ. ಆದರೆ ನಿಜವಾಗಿಯೂ ನಮ್ಮ ಬದುಕಿನ ನಿರ್ಧಾರಗಳನ್ನು ನಾವೇ ತೆಗೆದುಕೊಳ್ಳುತ್ತಿದ್ದೇವೆಯೇ? ಅಥವಾ ಕುಟುಂಬ, ಸಮಾಜ, ಸಂಬಂಧಗಳು, ಜವಾಬ್ದಾರಿಗಳು ಮತ್ತು ಜನ ಏನು ಹೇಳುತ್ತಾರೆ? ಎಂಬ ಕಾಣದ ಭಯದ ನಡುವೆ ನಮಗಾಗಿ ರೂಪಿಸಲಾದ ಬದುಕನ್ನು ನಾವು ಪ್ರದರ್ಶಿಸುತ್ತಿದ್ದೇವೆಯೇ? ಕೆಲವೊಮ್ಮೆ ಈ ಪ್ರಶ್ನೆಗೆ ಉತ್ತರ ಹುಡುಕುವ ಮುನ್ನವೇ ನಮ್ಮ ಜೀವನದ ಬಹುಭಾಗ ಕಳೆದು ಹೋಗಿರುತ್ತದೆ.

ಬಾಲ್ಯದಲ್ಲಿ ಪ್ರತಿಯೊಬ್ಬರ ಕನಸುಗಳಿಗೂ ತನ್ನದೇ ಆದ ಬಣ್ಣವಿರುತ್ತದೆ. ಬೆಳೆದಂತೆ ಆ ಕನಸುಗಳ ಮೇಲೆ ಕುಟುಂಬದ ನಿರೀಕ್ಷೆಗಳು, ಸಮಾಜದ ಮಾನದಂಡಗಳು, ಆರ್ಥಿಕ ಪರಿಸ್ಥಿತಿಗಳು ಮತ್ತು ಸಂಬಂಧಗಳ ಜವಾಬ್ದಾರಿಗಳು ಒಂದೊಂದಾಗಿ ಪದರಗಳಂತೆ ಆವರಿಸಿಕೊಳ್ಳುತ್ತವೆ. ಕೊನೆಗೆ ನಾವು ಬಯಸಿದ ಬದುಕಿಗಿಂತ ನಮ್ಮಿಂದ ನಿರೀಕ್ಷಿಸಲಾದ ಬದುಕನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಸಂತೋಷವಾಗಿರುವಂತೆ ಕಾಣಲು ಪ್ರಯತ್ನಿಸುತ್ತೇವೆ. ಆಗ ನಮ್ಮೊಳಗೆ ಒಂದು ಮೌನ ಪ್ರಶ್ನೆ ಉದ್ಭವಿಸುತ್ತದೆ ಇದು ನಾನು ಆಯ್ಕೆ ಮಾಡಿಕೊಂಡ ಬದುಕೇ ಅಥವಾ ನನ್ನಿಂದ ನಿರೀಕ್ಷಿಸಲಾದ ಬದುಕೇ?

ಕೆಲವೊಮ್ಮೆ ನಮ್ಮ ಜೀವನದ ದೊಡ್ಡ ನಿರ್ಧಾರಗಳಿಗೂ ನಮ್ಮ ಮನಸ್ಸಿಗಿಂತ ಸಮಾಜದ ಅಭಿಪ್ರಾಯವೇ ಹೆಚ್ಚು ಪ್ರಭಾವ ಬೀರುತ್ತವೆ. ಇಷ್ಟವಿಲ್ಲದ ಸಂಬಂಧಗಳನ್ನು ಮುಂದುವರಿಸುವುದು , ಇಷ್ಟವಾದ ದಾರಿಯನ್ನು ಬಿಟ್ಟುಬಿಡುವುದು, ತನ್ನ ಸಾಮರ್ಥ್ಯಕ್ಕಿಂತ ಕಡಿಮೆ ಬದುಕನ್ನು ಒಪ್ಪಿಕೊಳ್ಳುವುದು ಇವೆಲ್ಲವೂ ಜನ ಏನು ಹೇಳುತ್ತಾರೆ ಎಂಬ ಏಕಮಾತ್ರ ಪ್ರಶ್ನೆಯ ಮುಂದೆ ಮಂಡಿಯೂರಿ ಸೋತು ಹೋಗುತ್ತವೆ. ಸಮಾಜದ ಗೌರವಕ್ಕಾಗಿ ಬದುಕುತ್ತಾ ಬದುಕಿನ ನೆಮ್ಮದಿಯನ್ನೇ ಕಳೆದುಕೊಂಡರೆ ಆ ಗೌರವದ ಅರ್ಥವಾದರೂ ಏನು?

ಸಂಬಂಧಗಳಲ್ಲಿಯೂ ಇದೇ ಸೂತಕದ ಛಾಯೆ, ಪ್ರದರ್ಶನದ ನೆರಳು. ಬದುಕಿಗಿಂತ ಪಾತ್ರಕ್ಕೆ ಮಹತ್ವ. ಒಳ್ಳೆಯ ಸಂಗಾತಿಯಂತೆ ಕಾಣುವುದು ಬೇರೆ, ನಿಜವಾಗಿ ಸಂಗಾತಿಯ ಮನಸ್ಸನ್ನು ಅರಿಯುವುದು ಬೇರೆ, ಒಳ್ಳೆಯ ಮಗಳು ಅಥವಾ ಮಗನಂತೆ ಕಾಣುವುದು ಬೇರೆ, ತಂದೆ ತಾಯಿಯ ನೋವಿನಲ್ಲಿ ಅವರೊಂದಿಗೆ ನಿಲ್ಲುವುದು ಬೇರೆ, ಸ್ನೇಹಿತನೆಂದು ಬೀಗುವುದು ಬೇರೆ, ಸ್ನೇಹಿತನ ಅಗತ್ಯ ಕ್ಷಣದಲ್ಲಿ ಕೈ ಹಿಡಿಯುವುದು ಬೇರೆ.

ನಾವು ಸಂಬಂಧಗಳ ಪಾತ್ರಗಳನ್ನು ನಿರ್ವಹಿಸುತ್ತಿದ್ದೇವೆಯೇ? ಅಥವಾ ಸಂಬಂಧಗಳಲ್ಲಿ ನಿಜವಾಗಿಯೂ ಬದುಕುತ್ತಿದ್ದೇವೆಯೇ? ಸಂಬಂಧಗಳಲ್ಲಿ ಬೇಕಿರುವುದು ಉಪಸ್ಥಿತಿಯೋ? ಅಥವಾ ಪ್ರದರ್ಶನವೋ?

ಸಂತೋಷದಲ್ಲಿಯೂ ಇದೇ ಭಿನ್ನತೆ. ಮುಖದ ಮೇಲಿನ ನಗು ಸಂತೋಷದ ಸಂಕೇತವಾಗಿರಬಹುದು. ಆದರೆ, ಪ್ರತಿ ನಗುವಿನ ಹಿಂದೆ ಸಂತೋಷವೇ ಇರಬೇಕೆಂದಿಲ್ಲ. ಹೊರಗಿನ ಬದುಕು ಸುಂದರವಾಗಿ ಕಾಣಬಹುದು. ಆದರೆ, ಒಳಗಿನ ಬದುಕು ಅಷ್ಟೇ ಸುಂದರವಾಗಿದೆಯೇ? ಎಂಬುದು ಯಾರಿಗೆ ಬೇಕಿದೆ? ಸಂತೋಷವನ್ನು ಇತರರ ಪ್ರತಿಕ್ರಿಯೆಯಲ್ಲಿ ಹುಡುಕುವ ನಾವು ಯಾರು ನಮ್ಮನ್ನು ನೋಡದಿದ್ದರೂ ನಾವು ಇದೇ ರೀತಿಯಲ್ಲಿ ಬದುಕುತ್ತೇವೆಯೇ?

ಯಶಸ್ಸಿಗೂ ಅದೇ ಪ್ರದರ್ಶನದ ರೂಪ ನಾವು ಬಯಸುತ್ತಿರುವುದು ಯಶಸ್ವಿಯಾಗಬೇಕೆಂದೇ? ಅಥವಾ ಯಶಸ್ವಿಯಾಗಿದ್ದೇವೆ ಎಂದು ಕಾಣಿಸಿಕೊಳ್ಳಬೇಕೆಂದೇ? ಜೀವನವೆಂದರೆ ಎಲ್ಲರ ಮೆಚ್ಚುಗೆ ಪಡೆಯುವ ಸ್ಪರ್ಧೆಯಲ್ಲ. ಪ್ರತಿಯೋರ್ವರಿಗೂ ಸಮರ್ಥಿಸಿಕೊಳ್ಳುವ ಅಗತ್ಯವೂ ಇಲ್ಲ. ಎಲ್ಲರೂ ಒಪ್ಪಿಕೊಳ್ಳುವ ದಾರಿಯೇ ನಮಗೆ ಸರಿಯಾದ ದಾರಿ ಆಗಬೇಕೆಂದಿಲ್ಲ ಕೆಲವೊಮ್ಮೆ ನಮ್ಮ ಸರಿಯಾದ ಸ್ವಯಂ ನಿರ್ಧಾರ ಸಮಾಜಕ್ಕೆ ಇಷ್ಟವಾಗುವ ಹತ್ತು ನಿರ್ಧಾರಗಳಿಗಿಂತ ಹೆಚ್ಚು ಮೌಲ್ಯಯುತವಾದದ್ದಾಗಿರಬಹುದು.

ಕೊನೆಗೆ ಎಲ್ಲರಿಂದ ಎಲ್ಲದರಿಂದ ದೂರ ಸರಿದು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ ನಾನು ನಿಜವಾಗಿಯೂ ನನ್ನ ಬದುಕನ್ನು ಬದುಕುತ್ತಿದ್ದೇನೆಯೇ ಅಥವಾ ನನ್ನಿಂದ ನಿರೀಕ್ಷಿಸಲಾದ ಬದುಕನ್ನು ಅತ್ಯಂತ ಸುಂದರವಾಗಿ ಪ್ರದರ್ಶಿಸುತ್ತಿದ್ದೇನೆಯೇ?

ಬದುಕು ಒಂದು ಪ್ರದರ್ಶನವಲ್ಲ ಅದು ನಮ್ಮದೇ ಆದ ಸುಂದರ ಅನುಭವ. ಅದನ್ನು ಬದುಕಬೇಕಷ್ಟೇ.

# ಸಕಾರಾತ್ಮಕ ಚಿಂತನೆಯಿಂದ ಉನ್ನತ ಗುರಿ ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿದ್ಯಾರ್ಥಿಗಳು ಸಮಯಕ್ಕೆ ಆದ್ಯತೆ ನೀಡಬೇಕು. ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಉನ್ನತ ಗುರಿ ತಲುಪಬೇಕು ಎಂದು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಸಲಹೆ ನೀಡಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಉನ್ನತಿ ಎಜುಕೇಷನ್ ಟ್ರಸ್ಟ್‌ನ ಎ.ಪಿ.ಜೆ. ಪಿಯು ಕಾಲೇಜಿನ ಆಡಳಿತ ಮಂಡಳಿಯಿಂದ ಪಿಯುಸಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ನವೋನ್ನತಿ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮನುಷ್ಯ ತನ್ನ ಹೃದಯದಲ್ಲಿ ಮಾನವೀಯತೆಗೆ ಜಾಗ ಕೊಡಬೇಕು. ಸತ್ಕಾರ್ಯ, ಇನ್ನೊಬ್ಬರಿಗೆ ಒಳಿತು ಬಯಸುವ ಗುಣ ನಮ್ಮದಾಗಬೇಕೆಂದರೆ ಸದಾ ಧನಾತ್ಮಕ ವಿಷಯಗಳತ್ತ ಗಮನ ಹರಿಸಬೇಕು. ಆಧುನಿಕ ದಿನಗಳಲ್ಲಿ ಮೊಬೈಲ್ ಪ್ರಭಾವ ಹೆಚ್ಚಾಗುತ್ತಿದೆ.




ಅದರಲ್ಲಿ ಒಳಿತು-ಕೆಡಕು ಎರಡೂ ಇರುತ್ತದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಬೇಕಾದುದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕೆಂದರು.

ಮನಸ್ಸು ಫಲವತ್ತಾದ ಭೂಮಿ. ನಾವು ಯಾವ ಬೀಜ ಬಿತ್ತುತ್ತೇವೆಯೋ ಅದೇ ಫಲ ಸಿಗುತ್ತದೆ. ಇದನ್ನು ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಳ್ಳಬೇಕು ಎಂದರು.

ಸಂಪನ್ಮೂಲ ವ್ಯಕಿ ಡಾ. ರಾಹುಲ್ ದೇವರಾಜ್ ಮಾತನಾಡಿ, ಮಕ್ಕಳು ದೊಡ್ಡ ಕನಸುಗಳನ್ನು ಕಾಣಬೇಕು. ನಮ್ಮಿಂದ ಆಗುವುದಿಲ್ಲವೆಂಬ ಸಂಕುಚಿತ ಮನೋಭಾವದಿಂದ ಹೊರಬಂದು ಏನನ್ನಾದರೂ ಸಾಧಿಸುತ್ತೇನೆಂಬ ಛಲವಿದ್ದರೆ ಜೀವನದಲ್ಲಿ ಮುಂದೆ ಬರಬಹುದು. ಮಕ್ಕಳು ಪಠ್ಯಪುಸ್ತಕ ಅಧ್ಯಯನ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕೆಂದರು.

ಮಹಾರಾಷ್ಟ್ರದಲ್ಲಿ ಐಫೋನ್ ಕೊಡಿಸಿ ಎಂದು ಯುವಕನೊಬ್ಬ ಪರ್ವತದಿಂದ ಬಿದ್ದ ಘಟನೆ ಮನಕಲುಕುತ್ತಿದೆ. ಮಗನನ್ನು ಉಳಿಸಲು ಬಂದ ತಂದೆ ಹಾಗು ತಾಯಿ ಇಬ್ಬರು ಭಾರೀ ಪರ್ವತದಿಂದ ಜಿಗಿದು ಸಾವಿಗೆ ಶರಣಾಗಿದ್ದಾರೆ. ವಿದ್ಯಾರ್ಥಿಗಳು ಸರಳತೆ ಮೈಗೂಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಸಂದೇಶದಂತೆ ಸರಳತೆ ಪಾಲಿಸಬೇಕು. ಜೀವನವನ್ನು ಬ್ರಾಂಡ್ ಮಾಡಿಕೊಳ್ಳಬೇಕೆ ಹೊರತು ಮೊಬೈಲ್ ಹಾಗೂ ಧರಿಸುವ ಬಟ್ಟೆಗಳಿಂದ ಅಲ್ಲವೆಂದು ಕಿವಿಮಾತು ಹೇಳಿದರು.

ಆಡಳಿತ ಮಂಡಳಿ ಅಧ್ಯಕ್ಷ ಸಿ.ಕೆ.ದೇವರಾಜ್ ಮಾತನಾಡಿ, ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ನಿರ್ದೇಶಕ ಡಿ.ಮುರಳಿ ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಮ್ಮ ಶಿಕ್ಷಣ ಸಂಸ್ಥೆ ಒಳ್ಳೆಯ ಕೆಲಸ ಮಾಡುತ್ತಿದೆ. ಸಾಮಾಜಿಕ ಜಾಲತಾಣಗಳಿಂದ ವಿದ್ಯಾರ್ಥಿಗಳು ದೂರವಿರಬೇಕು. ಸಮಯಕ್ಕೆ ಆದ್ಯತೆ ನೀಡುತ್ತಾ ವ್ಯಾಸಂಗ ಮಾಡಬೇಕು. ಕಳೆದು ಹೋದ ಸಮಯ ಮರಳಿ ಬರುವುದಿಲ್ಲವೆಂಬ ಅರಿವು ಎಲ್ಲರಿಗೂ ಇರಬೇಕೆಂದರು.

ಪ್ರಾಂಶುಪಾಲ ರಾಮಣ್ಣ ಮಾತನಾಡಿ, ಶ್ರಮಪಟ್ಟರೆ ಫಲ ಸಿಗುತ್ತದೆಂದು ಹೇಳಿದರು.

2025ರ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ರ‍್ಯಾಂಕ್, ಜಿಲ್ಲೆಗೆ ತೃತೀಯ ಸ್ಥಾನ ಹಾಗು ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿನಿ ಹೆಚ್.ಜಿ. ಅರ್ಪಿತಾ ಅವರಿಗೆ 1 ಲಕ್ಷ ರೂ. ನಗದು ಪುರಸ್ಕಾರವನ್ನು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿ.ಕೆ.ದೇವರಾಜ್, ಮುಖ್ಯ ನಿರ್ದೇಶಕ ಡಿ.ಮುರಳಿ ನೀಡಿದರು. ಕಾಲೇಜು ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಗೆ ಆಯ್ಕೆ





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ವಚನ ಸಾಹಿತ್ಯ ಪರಿಷತ್ (ರಿ) ಬೆಂಗಳೂರು, ಸುಮಂಗಲಿ ಸೇವಾಶ್ರಮ ಹಾಗೂ ಪ್ರೋ.ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಗೆ ಹೊಳೆನರಸೀಪುರ ತಾಲ್ಲೂಕಿನ ವಳಂಬಿಗೆ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯಶಿಕ್ಷಕ, ವಿಶ್ವನಾಥ ಡಿ. ಹಾಗೂ ಹಾಸನದ ವಾಣಿವಿಲಾಸ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ, ದಯಾನಂದ ಬಿ.ಎಂ.ಅವರು ಆಯ್ಕೆಯಾಗಿದ್ದಾರೆ ಎಂದು ವಚನ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಎಂ.ವಿ.ತ್ಯಾಗರಾಜ್ ತಿಳಿಸಿದ್ದಾರೆ.

ಶಾಲೆಯ ಸಮಗ್ರ ಅಭಿವೃದ್ಧಿ, ಗುಣಮಟ್ಟದ ಶಿಕ್ಷಣ, ನಾವೀನ್ಯಯುತ ಕಲಿಕೆ,ಬೋಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು,

ಇದೇ ತಿಂಗಳ 29 ರಂದು ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-24

1608: ಇಂಗ್ಲೆಂಡ್‌ನಿಂದ ಭಾರತಕ್ಕೆ ಬಂದ ಮೊದಲ ಆಂಗ್ಲ ಹಡಗು ಹೆಕ್ಟರ್ ಸೂರತ್ ಕರಾವಳಿಗೆ ಆಗಮಿಸಿತು. ಇದು ಭಾರತದಲ್ಲಿ ಬ್ರಿಟಿಷರ ವ್ಯಾಪಾರ ವಿಸ್ತರಣೆಗೆ ಪ್ರಮುಖ ಆರಂಭಿಕ ಹಂತವಾಯಿತು.

1690: ಜಾಬ್ ಚಾರ್ನಾಕ್ ನೇತೃತ್ವದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ ಕಲ್ಕತ್ತಾ (ಇಂದಿನ ಕೋಲ್ಕತ್ತಾ) ಪ್ರದೇಶದಲ್ಲಿ ನೆಲೆ ಸ್ಥಾಪಿಸಲು ಮುಂದಾಯಿತು.

1814: ಅಮೆರಿಕದ ವಾಷಿಂಗ್ಟನ್ ಡಿ.ಸಿ. ಮೇಲೆ ಬ್ರಿಟಿಷ್ ಪಡೆಗಳು ದಾಳಿ ನಡೆಸಿ ವೈಟ್ ಹೌಸ್ ಸೇರಿದಂತೆ ಪ್ರಮುಖ ಕಟ್ಟಡಗಳಿಗೆ ಬೆಂಕಿ ಹಚ್ಚಿದವು.

1947: ಭಾರತದ ಸ್ವಾತಂತ್ರ್ಯದ ಕೆಲವೇ ದಿನಗಳ ನಂತರ, ಅಸ್ಸಾಂನ ಗುವಾಹಟಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದ ಪ್ರಮುಖ ಬೆಳವಣಿಗೆಗಳು ನಡೆದವು.

**ಜನನ**

1899: ಸತ್ಯೇಂದ್ರನಾಥ ಬೋಸ್, ಖ್ಯಾತ ಭಾರತೀಯ ಭೌತಶಾಸ್ತ್ರಜ್ಞ

# ಮುತ್ತಜ್ಜಿ-2

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-55**



ಅವನಿಗಾಗ ಸುಮಾರು ಏಳೆಂಟು ವರ್ಷ ಇರಬಹುದು, ಅವರ ಮನೇಲಿ ಆಗ ಅವನ ಅಪ್ಪಯ್ಯ, ಅಮ್ಮ, ಶೀಲಕ್ಕ, ಸುಮ, ಪಾಪಣ್ಣ, ದಿವಾಕರ ಮತ್ತೆ ಅವರ ಮನೆಯಲ್ಲೇ ಬಹಳ ಸಮಯದಿಂದಿದ್ದ ಮುತ್ತಜ್ಜಿ. ಮುತ್ತಜ್ಜಿ ಅಂದ್ರೆ ದಿವಾಕರನಪ್ಪಯ್ಯನ ಅಜ್ಜಿ. ಮನುಷ್ಯ ಪ್ರಾಣಿಯ ಮೈಯಲ್ಲಿ ಎಷ್ಟು ಸುಕ್ಕು-ನೆರಿಗೆಗಳಾಗಬಹುದೋ ಅಷ್ಟೆಲ್ಲವೂ ಅಜ್ಜಿಯ ಮೈಯಲ್ಲಿ ಇದ್ದವು. ವಯಸ್ಸೂ ಸುಮಾರಾಗಿ ನೂರಾಐದು ಆಗಿತ್ತೆಂದು ಹೇಳ್ತಿದ್ರು. ಆದ್ರೂ ಚೆನ್ನಾಗಿ ತಿರುಗಾಡಿಕೊಂಡಿದ್ದ ಅಜ್ಜಿಗೆ ಶಕ್ತಿ ನೀಡಿದ್ದೆಂದರೆ ಏಡಿ, ಕೆಸ, ಚೊಗ್ಚೆಸೊಪ್ಪು, ಮಳಲಿ-ಪಟ್ಲೆ ಮೀನು, ಎಲೆ ಅಡಿಕೆ, ಆಗಾಗ ಸಿಗ್ತಾ ಇದ್ದ ಬ್ರಾಂಡಿ, ಮಳೆಗಾಲದಲಿ ವಿಫುಲವಾಗಿ ಸಿಗ್ತಾ ಇದ್ದ ಎಳೆ ಬಿದಿರು-ಕಳಿಲೆ. ಇದ್ರಲ್ಲಿ ಅಜ್ಜಿಗೆ ಇಷ್ಟ ಆಗ್ತಿದ್ದಿದ್ದು ಎರಡು ದಿನ ನೆನೆಸಿಟ್ಟು ಹುಚ್ಚೆಳ್ಳು ಹಾಕಿ ಮಾಡ್ತಿದ್ದ ಹುಳಿಗಳಿಲೆ ಸಾರು. ಇನ್ನು ಕೆಸ ವರ್ಷವಿಡೀ ಸಿಗ್ತಿತ್ತು. ಅವರ ತೋಟದಲ್ಲೇ ಹಳ್ಳದ ಆಚೀಚೆ ಬೆಳೀತಿದ್ದ ಕೆಸಾನ ತಾನೇ ಹೋಗಿ ಕುಯ್ಕೊಂಡುಬಂದು ಚೆನ್ನಾಗಿ ಒರೆಸಿ ಗಂಟುಕಟ್ಟಿ ಅಮ್ಮನಿಗೆ ಏ ಕಮ್ಲಾಕ್ಷೀ, ಕೆಸೀನ್ ಎಸ್ರುನ್ನ ಹುಳ್ಳುಳ್ಳಗೆ ಮಾಡುಟಿ ಎಂದು ಸಲಹೆ ಕೊಡ್ತಿತ್ತು. ಮೀನು ತಿನ್ನೋವಾಗ, ಅಜ್ಜಿ ಮಾತ್ರ ಟಕಾಟಕ್ ಆಗಿ ಬಿಡಿಸಿಕೊಂಡು ಹಲ್ಲಿಲ್ದಿದ್ರೂ ಹಾಗೇ ನೊಣೀತಾ ನುಂಗಿ ಕಮ್ಲಾಕ್ಷೀ ಇನ್ನೊಂದೆರ್ಡ್ಡಿದ್ರೆ ಹಾಕು, ಹುಳ್ಳುಳ್ಳಗೆ ತುಂಬಾ ವೈನಾಗೀತೆ ಎಂದು ಕರೀತಿತ್ತು.

ಈ ಮುತ್ತಜ್ಜಿ ವಿರಾಮದ ಸಮಯದಲ್ಲಿ ಎಲೆಯಡಿಕೆ ಚೀಲ ತೆಗೆದು ನಿಧಾನವಾಗಿ ವೀಳೇದೆಲೆಯ ತೊಟ್ಟು ಕಿತ್ತು ಹಾಕಿ, ತೊಡೆ ಮೇಲೆ ಉಜ್ಜಿ ಒರೆಸಿ, ಅಡಿಕೆ ತೆಗೆದು ಅದು ಗೋಟಡಿಕೆಯಾಗಿದ್ರೆ, ಕಾರಾ ಅರೆಯೋ ಕಲ್ಲಿನ ಬಳಿಯಿದ್ದ ಅರಿಶಿನಕೊಂಬು, ತೆಂಗಿನಕಾಯಿ, ಶುಂಠಿ, ಬೆಳ್ಳುಳ್ಳಿ ಜಜ್ಜಲು ಬಳಸುತ್ತಿದ್ದ ಉಂಡ್ಗಲ್ಲನ್ನು ತರಲು ಕೂಗುತ್ತಿತ್ತು. ಯಾರಾದರೂ ಹೋಗಿ ಜಜ್ಜಿ ಕೊಟ್ಟ ಮೇಲೆ ಅಜ್ಜಿ ಕಡ್ಡಿಪುಡಿ, ಸುಣ್ಣ, ಓಮಕ್ಕಿ, ಸ್ವಲ್ಪ ಕೊಬ್ರಿ ತುಂಡು, ಕಾಚು ಎಲ್ಲಾ ಸೇರಿಸಿ ಬಾಯಾಡಿಸ್ತಾ ಕಾಲನ್ನು ಉಡಿದು ನೀಡಿ, ಗೋಡೆಗೆ ಒರಗಿ ಮುಂದಿನ ಗೋಡೇನೋ, ಕತ್ತಲೆಯನ್ನೋ ದಿಟ್ಟಿಸುತ್ತಾ ಕೂರ್ತಿತ್ತು. ಆ ಬಿಳಿ ಗೋಡೆಯಲ್ಲೆಲ್ಲೋ ಇರಬಹುದಾದ ಕತ್ತಲೆಯ ಅನ್ವೇಷಣೆ ಮಾಡ್ತಿದೆಯೋ ಎಂದುಕೊಳ್ಳುವಂತಿತ್ತು.

ಕೆಲವೊಮ್ಮೆ ಕಣ್ಣು ಮುಚ್ಚಿ ತಲೆಯನ್ನು ಗೋಡೆಗೊರಗಿಸಿ ಕಾಲ್ಚಾಚಿ ಕೂತ್ಕೊಂಡು ನಿದ್ದೆ ಮಾಡ್ತಿತ್ತೋ ಅಥವಾ ತನ್ನ ಸುಧೀರ್ಘ ಬದುಕಿನ ಯಾವುದೋ ಘಟನೆಯ ಕುರಿತು ಏನನ್ನಾದ್ರೂ ಯೋಚಿಸ್ತಿತ್ತೋ ಏನೋ. ಕೆಸೊಳ್ಳಿನ ತನ್ನ ಗಂಡನಮನೆ, ಬಿದ್ರಳ್ಳಿಯ ಮೊದಲ ಮಗಳಮನೆ, ಕುರುಕ್ಕಿಯ ಮಗನಮನೆ, ತನ್ನ ತವರುಮನೆ, ಸುಂಕಸಾಲೆಯ ಇನ್ನೊಬ್ಬ ಮಗಳಮನೆ, ಛತ್ರಮೈದಾನದ ಹೊಸಂತಯ್ಯನ ಮನೆ, ಹೀಗೇ ಏನೇನೋ ಇರಬಹುದು. ಹಾಗೇ ಒರಕ್ಕೊಂಡಿದ್ದ ತಲೆಯಲ್ಲಿದ್ದ ಬಿಳಿಯಾದ ಎಣ್ಣೆ ಜಿಡ್ಡಿನ ಮೋಟು ಕೂದಲು ಭುಜದ ಮೇಲೆ ಹರಡಿರುತ್ತಿತ್ತು. ಕೆಲವೊಮ್ಮೆ ಕಣ್ಣಿನ ಪಿಸುರೂ ಸಹ ಹಾಗೇ ಇರ್ತಿತ್ತು. ಅವರ ಮನೆಯ ಎದುರೇ ಇದ್ದ ಸುಬ್ಬಮ್ಮ ಎಂಬ ಎಪ್ಪತ್ತೆಂಬತ್ತರ ಅಜ್ಜಿಯೊಂದು ಇದಕ್ಕೆ ಜೊತೆ. ಮಧ್ಯಾಹ್ನ ಹನ್ನೊಂದರ ನಂತರ ಒಂದು ಚಿಕ್ಕ ಕುಡ್ಲು, ಬಾಚಣಿಗೆ ಹಿಡಿದುಕೊಂಡು ಅದರ ತಲೆ ಇದು, ಇದರ ತಲೆ ಅದು ನೋಡುತ್ತಾ ಎಲೆಯಡಿಕೆ ಜಗಿಯುತ್ತಾ ಕೂರ್ತಿದ್ದವು. ಈ ಅಜ್ಜಿಗಳು ತಮ್ಮ ತಮ್ಮ ತಲೆಗೂದಲು ಒಂದು ಮೈಲುದ್ದ ಇದೆ ಎಂದುಕೊಂಡಿದ್ದವೇನೋ, ಮಧ್ಯಾಹ್ನ ಮೂರು ಗಂಟೆಯಾದ್ರೂ ತಲೆ ಎಂಬ ಮಹಾಕಾಡಿನಲ್ಲಿ ತಮ್ಮ ನಡುಗುತ್ತಿದ್ದ ಬೆರಳುಗಳನ್ನು ಯಾತ್ರೆಗೆ ಬಿಟ್ಟಿರುತ್ತಿದ್ದವು. ನಡುನಡುವೆ ಬೀಡಿ ಸೇದುವವರು ಬೆರಳು ಹಿಡಿಯುವಂತೆ ತುಟಿಯ ಮುಂದೆ ಬೆರಳುಗಳ ಹಿಡಿದು ಎಲೆಯಡಿಕೆ ರಸವನ್ನು ಪಿಚಕ್ಕನೆ ಚೆಲ್ಲನಿಸಿ ಮತ್ತೆ ಏನೇನೋ ಮಕ್ಕಳ, ಮೊಮ್ಮಕ್ಕಳ, ಜಮೀನಿನ, ಹೆರಿಗೆಯ, ಮದುವೆಯ, ಬಾಣಂತನದ, ಅವರಿವರಿಗೆ ಸೀರೆ ಉಡಿಸಿದ, ಅತ್ತೆ-ಸೊಸೆ ಕಚ್ಚಾಟದ, ಆಸ್ತಿ ಪಾಲಿನ ವಿಷಯವನ್ನೇ ಹೊರಳಿಸಿ ಹೊರಳಿಸಿ ಎತ್ತಿ ಹಾಕುತ್ತಿದ್ದವು. ಈ ಅಜ್ಜಿ ಮಾತಾಡಿದ್ದು ಅದಕ್ಕೆ ಕೇಳಿಸಿತೋ ಗೊತ್ತಿಲ್ಲ. ಆ ಅಜ್ಜಿ ಮಾತಾಡಿದ್ದು ಇದಕ್ಕೆ ಅರ್ಥವಾಯ್ತೋ ಅದೂ ಗೊತ್ತಾಗ್ತಿರಲಿಲ್ಲ. ಆದರೂ ಒಬ್ಬರಿಗೊಬ್ಬರು ಹ್ಞೂಗುಡುತ್ತಿದ್ದವು.

ಈಗ ಮುಖ್ಯ ವಿಷಯಕ್ಕೆ ಬರೋಣ. ಮುತ್ತಜ್ಜಿ ದಿವಾಕರನಿಗೆ, ಮಗಾ, ಬಾ ಇಲ್ಲಿ; ನಿಂಗೊಂದು ಜಂಬ್ರ ಕೊಡ್ತಿನಿ ಎಂದು ಆಗಾಗ ಕೊಬ್ಬರಿ ತುಂಡನ್ನೋ ಇಲ್ವೇ ಹತ್ತೋ, ಹದಿನೈದೋ ಪೈಸೆಯನ್ನ ಕೊಡ್ತಾ ಇತ್ತು. ನೆಂಟರಿಷ್ಟರು ಮನೆಗೆ ಬಂದಾಗ ಅಜ್ಜಿ ಕೈಗೆ ಹದಿನೈದೋ ಇಪ್ಪತ್ತೋ ರೂಪಾಯಿ ಕೊಟ್ಟುಹೋಗ್ತಿದ್ದರು. ದಿವಾಕರ ಆಗ ಅಜ್ಜಿಯ ಮೇಲೆ ಎಲ್ಲಿಲ್ಲದ ಪ್ರೀತಿ ತೋರಿಸ್ತಿದ್ದ. ಎಲೆಯಡಿಕೆ ತರಲು ಅಂಗ್ಡೀಗೆ ಕಳಿಸಿದ್ರೆ, ಉಳಿದ ಚಿಲ್ರೆ ಸಿಗುತ್ತಿತ್ತು. ಮೂರ್ನಾಲ್ಕು ದಿನಕ್ಕೆ ಬೇಕಾಗೋಷ್ಟು ಎಲೆ, ಅಡಿಕೆ, ಕಡ್ಡಿಪುಡಿ ಇತರೆ ಎಲ್ಲಾ ತಂದುಕೊಡ್ತಿದ್ದ. ಐದು ರೂಪಾಯಿಯಲ್ಲಿ ಕಡಿಮೆ ಎಂದ್ರೂ ನಾಲ್ಕಾಣೆ-ಎಂಟಾಣೆ ಚಿಲ್ರೆ ಉಳೀತಿತ್ತು. ಆ ಚಿಲ್ರೆ ಅಂದ್ರೆ ರೂಪಾಯಿಯಲ್ಲಿ ಹತ್ತೋ, ಹದಿನೈದೋ, ಇಪ್ಪತ್ತೈದೋ ಪೈಸೆಗಳು ಜಾಸ್ತಿ ಉಳಿಯುವಂತೆ ಬೆಲೆ ನಿಗದಿಮಾಡಿ ಲೆಕ್ಕ ಒಪ್ಪಿಸ್ತಿದ್ದ. ಉಳಿದ್ ಚಿಲ್ರೆ ಕಾಸು ನಿಂಗೇಯ ಎನ್ನುತ್ತಿತ್ತು. ಕೆಲವು ದಿನ ಅಜ್ಜಿಯ ಚೀಲದಲ್ಲಿ ದಿವಾಕರನಿಗೆ ಕೊಡ್ತಿದ್ದ ಚಿಲ್ರೆ ಕಾಸಷ್ಟೂ ಇರ್ತಿರಲಿಲ್ಲ. ಆಗ ಅದು ದಿವಾಕರನನ್ನೇ ಮಗಾ, ಅವತ್ತು ಕೊಟ್ಟಿದ್ನಲ್ಲ ಚಿಲ್ರೆ ಇತತಾ ಕೊಟ್ಟಿರು, ನಾಳೆ ನಾಡಿದ್ದು ಜಾಸ್ತಿ ಕೊಡ್ತೀನಿ ಎಂತಿತ್ತು. ಅದೆಲ್ಲಿರುತ್ತೆ? ಸಾಮಿಲ್ಲಣ್ಣನ ಅಂಗ್ಡಿ ಅಥ್ವಾ ಪಿಚ್ಚರ್ ಟಾಕೀಸ್ ರಸ್ತೇಲಿದ್ದ ಅಜ್ಜನಂಗ್ಡಿ; ಅದೂ ಇಲ್ಲ ಅಂದ್ರೆ ಡೀಲಕ್ಸ್ ಹೋಟ್ಲು ಪಕ್ಕದಲ್ಲಿದ್ದ ಪಡೀಬೇರಿ ಅಂಗ್ಡಿಗೆ ಹೋಗಿ ಕಂಬರ್‌ಕಟ್ಟೋ, ಜಾಮೂನೋ, ಹಾಲ್ಕೋವಾನೋ ತಿಂದಾಗಿತ್ತು. ಇಲ್ಲ ಕಣಜ್ಜಿ ಎಂದರೆ ಹೋಗ್ಲಿ ಬಿಡು ಕಮ್ಲಾಕ್ಷಿಗೆ ಹೇಳು ಎನ್ತಿತ್ತು.

ಒಂದು ಸಲ ಏನಾಯ್ತುಂದ್ರೆ, ಅಜ್ಜಿಗೆ ಹುಷಾರಿರ್ಲಿಲ್ಲ. ವಯಸ್ಸು ಬೇರೆ ಆಗಿತ್ತಲ್ವಾ ಹತ್ತಿರದ ಸಂಬಂಧಿಗಳೆಲ್ಲ ಒಬ್ಬೊಬ್ಬರಾಗಿ ಬಂದು, ಇದು ಅಂತಿಮ ದರ್ಶನವೇನೋ ಎನ್ನುವಂತೆ ಕುರಿಮಾಂಸನೋ, ಕೋಳಿ ತೊಂಡನ್ನೋ ಮಾಡಿಕೊಂಡು ಬಂದು ಬ್ರಾಂಡಿ, ಎಲೆಯಡಿಕೆ ಎಲ್ಲಾ ತಂದುಕೊಡಲಾರಂಬಿಸಿದರು. ಅದು ಮಳೆಗಾಲ ಆಗಿದ್ದರಿಂದ ಅಜ್ಜಿಗೆ ವಿಪರೀತ ಉಬ್ಬಸ ಸಹಾ ಆಗಿತ್ತು. ದಿವಾಕರನ ಅಪ್ಪಯ್ಯ ಗದ್ದೆ ತೋಟ, ಆಫೀಸ್ ಎಲ್ಲಾ ಮರೆತು ಮನೆಯಲ್ಲೇ ಇದ್ದು ಅಜ್ಜಿಯ ಆರೋಗ್ಯವನ್ನು ನೋಡಿಕೊಳ್ತಾ ಇದ್ರು.

ಮಲೆನಾಡಿನ ಕಡೆ ಮಳೆ ಅಂದ್ರೆ, ಅದ್ರ ಕಥೇನೇ ಬೇರೆ. ಬೆಳಗ್ಗೆಯಿಂದ ಮಾರನೇ ಬೆಳಗ್ಗೆಯವರೆಗೂ ಬಿಡದೇ ಸುರಿಯುತ್ತಿತ್ತು. ಪಟ್ಟಣದ ರಸ್ತೆ ಮೇಲೂ ಕೆಲವೊಮ್ಮೆ ಕಲ್ಲೇಡಿ, ಹುಲ್ಲೇಡಿ, ಆಮೆಗಳು ಹರಿದಾಡುತ್ತಿದ್ದವು. ದಿವಾಕರನ ಮನೆಯ ಹಿಂದೆ ಇದ್ದ ಅರಳೀಮರದ ಮೇಲೆ ವಾಸಿಸುತ್ತಿದ್ದ ನೂರಾರು ಬೆಳ್ಳಕ್ಕಿ, ಕೊಕ್ಕರೆಗಳಲ್ಲಿ ದಿನಕ್ಕೆ ಎರಡಾದರೂ ಸತ್ತು ಬಿದ್ದಿರುತ್ತಿದ್ದವು. ಆರೋಗ್ಯವಾಗಿರುವವರ ಮೈ-ಕೈ ಕಾಲುಗಳು ಸಹಾ ಆ ಶೀತಕ್ಕೆ ಗೊಗ್ಗರವಾಗಿರುತ್ತಿದ್ದವು. ಈ ಸಮಯದಲ್ಲಿ ಶಾಲೆಗೆ ಹದಿನೈದರಿಂದ ಇಪ್ಪತ್ತು ದಿನ ರಜೆ.

ಶಾಲೆಗೆ ಹೋಗದಿದ್ದರೂ ದಿವಾಕರನಿಗೆ ಸ್ನೇಹಿತರೇನೂ ಕಡಿಮೆಯಿರಲಿಲ್ಲ. ಮಂಜ, ಸುಂದ್ರೇಶ, ಶರತ್, ಅಜ್ಜಿ ಮಗ, ತಂಬಿ, ಸುಧಾಕರ. ಹಾ! ಸುಧಾಕರ ಎಂದಾಗ ನೆನಪಿಗೆ ಬಂತು, ಒಂದು ದಿನ ಮಳೆ ಬಂದಾಗ ದಿವಾಕರನೂ ಅವ್ನೂ ಕಾಗದದ ದೋಣಿ ಮಾಡಿ ಚರಂಡೀಲಿ ಬಿಡ್ತಿದ್ದರು. ಅವೆಲ್ಲ ಸ್ವಲ್ಪ ಹೊತ್ತಿನಲ್ಲೇ ಆ ಮಹಾಪ್ರವಾಹದಲ್ಲಿ ಮುಳುಗಿ ಕಣ್ಮರೆಯಾಗುತ್ತಿದ್ದವು. ಹೀಗಾಗುತ್ತಲ್ಲ ಎಂದು ದಿವಾಕರನ ಮನೇಲಿದ್ದ ಒಂದು ತಗಡಿನ ಅಮುಲ್ ಹಾಲಿನಡಬ್ಬ ತಗೊಂಡು ಅದರ ಮುಚ್ಚಳವನ್ನು ಗಟ್ಟಿಯಾಗಿ ಹಾಕಿ ಚರಂಡೀಲಿ ಬಿಟ್ಟರು. ಆಗ ಗಾಜಿನ ಬಾಟಲಿಗಳು, ತಗಡಿನ ಡಬ್ಬಗಳು, ಮರದ ಕರಂಡಕಗಳು, ಬಿದಿರಿನ ಕೊಳವೆಗಳು, ಪಿಂಗಾಣಿಯ ಜಾರುಗಳನ್ನು ಮನೆಮನೆಗಳಲ್ಲೂ ಬೇಳೆ-ಕಾಳುಗಳನ್ನು ಹಾಕಿಡಲು ಬಳಸಲಾಗುತಿತ್ತು. ಸ್ಥಿತಿವಂತರ ಮನೆಗಳಲ್ಲಿ ಅಲ್ಯೂಮಿನಿಯಮ್ ಅಥವಾ ಸ್ಟೀಲ್ ಡಬ್ಬ ಇರುತಿತ್ತು. ಕೈಚೀಲವಿಲ್ಲದೇ ಅಂಗಡಿಗಳಿಗೆ ಯಾರೂ ಹೋಗುತ್ತಲೇ ಇರಲಿಲ್ಲ. ಹೆಚ್ಚಿನ ಎಲ್ಲ ದಿನಸಿಗಳನ್ನೂ ದಿನಪತ್ರಿಕೆಗಳ ಪೇಪರಿನಲ್ಲಿಯೇ ಕಟ್ಟಿಕೊಡುತಿದ್ದರು. ಪ್ಲಾಸ್ಟಿಕ್ ಎಂಬ ಮಾಯಾಂಗನೆ ಇನ್ನೂ ತನ್ನ ಕಬಂಧಬಾಹುಗಳನ್ನು ಚಾಚಿರಲಿಲ್ಲ. ಡೈರಿ ಹಾಲನ್ನು ಪ್ಲಾಸ್ಟಿಕ್ ತೊಟ್ಟೆಗಳಲ್ಲಿ ತುಂಬಿಸಿ ಮಾರ್ತಾರಂತೆ ಎಂಬುದು ಆಗ ಸೆನ್ಸೇಷನಲ್ ಸುದ್ದಿ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248